

ಗಟ್ಟಿಪುರಕ್ಕೆ ಹಸಿರು ಹೊದಿಕೆಯ ಅಭಯ ನೀಡಿರುವ ಬಿಲ್ವಪತ್ರೆ ವನ

ಹಸಿರುನೋಟದೊಂದಿಗೆ ಭಕ್ತಿಯ ಅಭಿವ್ಯಕ್ತಿಗೂ ಅವಕಾಶವುಂಟು.

ಸಿದ್ಧಗಂಗಾ ಮಠಾಧೀಶ ಶಿವಕುಮಾರ ಸ್ವಾಮಿಗಳು 1942ರಲ್ಲಿ ಮಹದೇಶ್ವರ ದೇವಾಲಯದ ಜೀರ್ಣೋದ್ಧಾರ ಪುನರ್ ಪ್ರತಿಷ್ಠಾಪನೆ ನೆರವೇರಿಸಿದರು. ಆ ಸಂದರ್ಭದಲ್ಲಿ ಸುತ್ತಲಿನ ವನಕ್ಕೆ 'ಬಿಲ್ವಪತ್ರೆವನ' ಎಂದು ನಾಮಕರಣ ಮಾಡಿದರು.

ಈ ವನದ ಹಿಂದೆಯೂ ಒಂದು ಕಥೆಯಿದೆ. ಹಿಂದೆ ಆ ಪ್ರದೇಶದಲ್ಲಿ ಸಿದ್ದೇಶ್ವರ ಗುಡಿ ಇತ್ತು. ಗುಡಿಯ ಬಳಿ ಬೃಹತ್ ಬಿಲ್ವಪತ್ರೆ ಮರವಿತ್ತು. ಸಿದ್ಧಪ್ಪ ದೇವರಿಗೆ ಶ್ರಾವಣ ಮಾಸದಲ್ಲಿ ಗ್ರಾಮಸ್ಥರೆಲ್ಲರೂ ಸೇರಿ 'ಉಪ್ವಾರ' ಮಾಡುತ್ತಿದ್ದರು. ಬೃಹದಾಕಾರದ ಪುರಾತನ ಮರ ಒಣಗಿತು. ಆದರೆ, ಬೇರಿನ ಮಾತೃಶಕ್ತಿ ಜೀವಂತವಾಗಿಯೇ ಇತ್ತು. ಆ ಬೇರಿನಿಂದ ಚಿಗುರಿದ ಬಿಲ್ವಪತ್ರೆಯ ನೂರಾರು ಕುಡಿಗಳು ಈಗ ಬೆಳೆದು ಹೆಮ್ಮರವಾಗಿವೆ.

ಗಟ್ಟಿಪುರಕ್ಕೆ ಮತ್ತೊಂದು ಚಾರಿತ್ರಿಕ ಆಯಾಮವಿದೆ. ಊರಿನ ಬೆಟ್ಟದ ಮೇಲೆ ಪ್ರಾಗೈತಿಹಾಸಿಕ ಕಲ್ಗೋರಿಗಳಿವೆ. ಹಳೆಯ ಶಿಲಾಯುಗದ ಕಲ್ಲಿನ ಆಯುಧಗಳನ್ನು ಅಲ್ಲಿ ಕಾಣಬಹುದು. ಇತಿಹಾಸ ವಿದ್ಯಾರ್ಥಿಗಳಿಗೆ ಈ ಕಲ್ಗೋರಿಗಳು ಹಾಗೂ ಕಲ್ಲಿನ ಆಯುಧಗಳು ಜೀವಂತ ಪಠ್ಯಗಳಿದ್ದಂತೆ. ಗುಹಾಂತರ ಸೋಮೇಶ್ವರ ದೇವಾಲಯ ಬೆಟ್ಟದ ಆಕರ್ಷಣೆಯನ್ನು ಹೆಚ್ಚಿಸಿರುವ ಮತ್ತೊಂದು ಸಂಗತಿ. ಬೆಟ್ಟದ ಇತಿಹಾಸ ವಿಜಯನಗರ ಸಾಮ್ರಾಜ್ಯದೊಂದಿಗೆ ತಳಕು ಹಾಕಿಕೊಂಡಿದೆ. ಚಿನ್ನ ಮತ್ತು ಕಬ್ಬಿಣದ ಗಟ್ಟಿಗಳನ್ನು ಇಲ್ಲಿ ತಯಾರಿಸಿ ವಿಜಯನಗರಕ್ಕೆ ಕಳಿಸಿಕೊಡಲಾಗುತ್ತಿತ್ತು. ಬೆಟ್ಟದ ಮೇಲಿದ್ದ ಚಿನ್ನ, ಬೆಳ್ಳಿ ಮತ್ತು ಕಬ್ಬಿಣದ ಕುಲುಮೆಗಳ ರಕ್ಷಣೆಗೆ ಕೋಟೆ ನಿರ್ಮಿಸಲಾಗಿತ್ತು. ಆ ಕುಲುಮೆ, ಒಳಕಲ್ಲುಗಳ ಕುರುಹುಗಳನ್ನು ಈಗಲೂ ಕಾಣಬಹುದು. ಕೋಟೆಯ ಕಾವಲು ಕಾಯುತ್ತಿದ್ದ ಕುರುಬರು ಇಂದಿಗೂ ಪಕ್ಕದ ಕೊಟ್ಟಗಾರಹಳ್ಳಿಯಲ್ಲಿ ನೆಲೆಸಿದ್ದಾರೆ.

'ಟಿಪ್ಪುಸುಲ್ತಾನ್ ಆಡಳಿತದಲ್ಲಿ ಮೈಸೂರು ಸೇನೆಗೆ ಚಿನ್ನ ಮತ್ತು ಕಬ್ಬಿಣದ ಗಟ್ಟಿಗಳನ್ನು ಗಟ್ಟಿಪುರದಿಂದ ಸಾಗಿಸಲಾಗುತ್ತಿತ್ತು' ಎಂದು ಶೈವಾಗಮ ಪಂಡಿತ ಹಾಗೂ ದಕ್ಷಿಣಾಭಿಮುಖ ಬಸವೇಶ್ವರ ಸ್ವಾಮಿ ದೇವಾಲಯದ ಪೂಜಾರಿ ಬಸವರಾಜ ಶಾಸ್ತ್ರಿ ಅವರು ಹೇಳುತ್ತಾರೆ.

ಬಿಲ್ವಪತ್ರೆ ವನದಲ್ಲಿ ಒಂದು ಸುತ್ತುಹಾಕಿದರೆ ನವೋಲ್ಲಾಸದ ಅನುಭವ ಉಂಟಾಗುತ್ತದೆ. ಈ ವನದ ಮೇಲ್ವಿಚಾರಣೆಯಲ್ಲಿ ಗ್ರಾಮಸ್ಥರೆಲ್ಲರೂ ಭಾಗಿಗಳಾಗಿದ್ದಾರೆ. ಎಳೆಯರಿಗೆ, ಯುವಜನರಿಗೆ ಪರಿಸರದ ಪಾಠಗಳನ್ನು ಮನದಟ್ಟು ಮಾಡಿಸಲಿಕ್ಕೆ ಪ್ರಶಸ್ತವಾದ ವನವಿದು. ಗ್ರಾಮಭಾರತದಲ್ಲಿ ಪರಿಸರ ಸಂರಕ್ಷಣೆಗೆ ಭಕ್ತಿಯೂ ಒಂದು ಧಾತುವಾಗಿ ಹೇಗೆ ಪರಿಣಮಿಸಿದೆ ಎನ್ನುವುದಕ್ಕೆ ಗಟ್ಟಿಪುರದ ಬಿಲ್ವವನ ಅತ್ಯುತ್ತಮ ಉದಾಹರಣೆ. ದೇಶಕ್ಕೆ ದೇಶವೇ ಜೀವದಾಯಿನಿಯಾದ ಆಮ್ಲಜನಕದ ಬಗ್ಗೆ ಮಾತನಾಡುತ್ತಿರುವಾಗ, ನಮ್ಮ ಆರೋಗ್ಯಕ್ಕೆ ಪೂರಕವಾದ ಪರಿಸರವನ್ನು ರೂಪಿಸಿಕೊಳ್ಳುವುದು ಹೇಗೆ ಎನ್ನುವುದಕ್ಕೂ ಗಟ್ಟಿಪುರದ ಬಿಲ್ವಪತ್ರೆ ವನದಂಥ ಹಸಿರುಸಿರಿ ಉತ್ತರವಾಗಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in



ಗಟ್ಟಿಪುರದ ಬಿಲ್ವಪತ್ರೆ ವನದ ನಡುವೆ ಇರುವ ಮಹದೇಶ್ವರ ಸ್ವಾಮಿ ದೇಗುಲ

